

# ಘಂ ಘಂ ಘಂ... ಗಮ್ ವಾಲ್!

**ಬಣ್ಣ ಬಣ್ಣದ, ಬಗೆ ಬಗೆಯ ಬಬಲ್ ಗಮ್‌ಗಳಿಂದ ತುಂಬಿರುವ, ಆಕರ್ಷಣೀಯ ಸ್ಥಳವಾಗಿ ಹೆಸರಾಗಿರುವ 'ಗಮ್ ವಾಲ್' ಹಿಂದಿರುವ ಕಥೆಯೇನು ಗೊತ್ತೇ?**

■ ಧಾರಿಣಿ ಮಾಯಾ

ನಾವೆಲ್ಲಾ ಸಣ್ಣವರಿದ್ದಾಗ ಬಬಲ್ ಗಮ್ಮನ್ನು ಚೆನ್ನಾಗಿ ಅಗಿದ ಮೇಲೆ ಶಾಲೆಯಲ್ಲಿ ಬೆಂಚಿನಡಿಯಲ್ಲಿ, ಬಸ್ಸಿನ ಸೀಟಿನಡಿಯಲ್ಲಿ, ಮಲಗುವಾಗಲೂ ಬಾಯಲ್ಲೇ ಇಟ್ಟುಕೊಂಡು, ಕೊನೆಗೆ ತಲೆಗೂದಲಿಗೆ ಅಂಟಿಕೊಂಡು ಅದನ್ನು ಬಿಡಿಸಲಾರದೆ ಕೂದಲಿಗೇ ಕತ್ತರಿ ಹಾಕುವ ತನಕ ಹೋಗುತ್ತಿತ್ತು. ಕಸದ ಬುಟ್ಟಿಯೊಂದನ್ನು ಬಿಟ್ಟು ಎಲ್ಲೆಂದರಲ್ಲಿ ಅಂಟಿಕೊಳ್ಳುತ್ತಿದ್ದುದೂ ಗೊತ್ತೇ ಇದೆ. ಆದರೆ ನಿಮಗೆ ಗೊತ್ತೇ, ಈ ಪುಟ್ಟ ಬಬಲ್ ಗಮ್ ಒಂದು ಗೋಡೆ ತುಂಬೆಲ್ಲಾ ರಾರಾಜಿಸುತ್ತ ಪ್ರಪಂಚವೇ ನಿಬ್ಬೆರಗಾಗುವಂತೆ ಮಾಡಿದೆ.

ಅಮೆರಿಕದ ಸ್ಟೇಟ್ ಆಫ್ ವಾಷಿಂಗ್ಟನ್‌ನ ಸಿಯಾಟಲ್ ನಗರದಲ್ಲಿ ನೋಡಲೇಬೇಕಾದ ಒಂದು ಮೋಜಿನ ಸ್ಥಳ ಪೈಕ್ ಮಾರ್ಕೆಟ್ಟಿನ ಬದಿಯ 'ಗಮ್ ವಾಲ್.' ಇದೇನಿದು 'ಗಮ್ ವಾಲ್' ಎಂದು ಆಶ್ಚರ್ಯವಾಯಿತೇ? ಹೌದು. ಈ ಗೋಡೆಯನ್ನು ನೋಡಿದಾಗ ಮೊದಲಿಗೆ ನನಗೂ ಸೋಜಿಗವೆನಿಸಿತು. ಇದೊಂದು ವಿಚಿತ್ರ ಆಕರ್ಷಣೀಯ ಸ್ಥಳವಾಗಿ ಪ್ರವಾಸಿಗರನ್ನು ಕೈಬೀಸಿ ಕರೆದು ಒಂದು ಅಂತರರಾಷ್ಟ್ರೀಯ ಆಕರ್ಷಣೆಯಾಗಿ ಸಾಂಪ್ರದಾಯಿಕವಲ್ಲದ ಕಲಾಕೃತಿಯಾಗಿದೆ.

15 ಅಡಿ ಎತ್ತರ ಹಾಗೂ 50 ಅಡಿ ಉದ್ದದ ಈ ಗೋಡೆಯ ತುಂಬಾ ಬಣ್ಣಬಣ್ಣದ ಬಬಲ್ ಗಮ್‌ಗಳು ಮುದ್ದೆಯಂತೆ, ಲಂಬವಾಗಿ, ವೃತ್ತಾಕಾರವಾಗಿ ಇನ್ನೂ ಅನೇಕ ವಿನ್ಯಾಸದಿಂದ ಅಲಂಕೃತಗೊಂಡಿವೆ. ಇದೆಲ್ಲಾ ಯಾಕೆ, ಏನು ಎಂಬೆಲ್ಲಾ ನನ್ನ ಪ್ರಶ್ನೆಗಳಿಗೆ ಒಂದಷ್ಟು ವಿವರ ಸಿಕ್ಕಿತು.

1990ರಲ್ಲಿ ಜನ ಟಿಕೆಟ್‌ಗೋಸ್ಕರ ಮಾರ್ಕೆಟ್ಟಿನ ಥಿಯೇಟರ್‌ನಲ್ಲಿ ಸಾಲಾಗಿ ನಿಂತು ಕಾಯುವಾಗ ತಮ್ಮ ಬಾಯಲ್ಲಿ ಜಗಿಯುತ್ತಿದ್ದ ಬಬಲ್ ಗಮ್ಮನ್ನು ಥಿಯೇಟರಿನ ಗೋಡೆಗೆ ಅಂಟಿಸಲು ಶುರುವಿಟ್ಟುಕೊಂಡರು. ಒಬ್ಬರು ಅಂಟಿಸುವುದನ್ನು ನೋಡಿ ಮತ್ತೊಬ್ಬರು, ಮಗದೊಬ್ಬರು ಎನ್ನುತ್ತಾ ಹೀಗೆ ಸಾಲಾಗಿ ಅಲ್ಲಿ ನಿಲ್ಲುತ್ತಿದ್ದ ಪ್ರತಿಯೊಬ್ಬರೂ ತಾವು ಅಗಿದ ಬಬಲ್ ಗಮ್ ಅಂಟಿಸುತ್ತಾ ಹೋದರು. ಇದು ಎಷ್ಟರ ಮಟ್ಟಿಗೆ ಆಯಿತೆಂದರೆ, ಆ ಥಿಯೇಟರಿನ ಇಟ್ಟಿಗೆ ಗೋಡೆಯೇ ಕಾಣದೇ ಇರುವಂತಾಗಿ, ಗೋಡೆ ತುಂಬೆಲ್ಲಾ ವೈವಿಧ್ಯಮಯ ಬಣ್ಣದ ಓಕುಳಿ ಎರಚಿದಂತೆ ತೋರಹತ್ತಿತು.

ಇದು ನೋಡಲು ಆಕರ್ಷಕವಾಗೇನೋ ಕಂಡರೂ, ಯಾರೋ ಅಗಿದು ಅಂಟಿಸಿದ ಗಮ್‌ಗಳನ್ನು ಮುಟ್ಟಿ ನೋಡುವ ಸಾಹಸಕ್ಕೆ ಮಾತ್ರ ನಾ ಹೋಗಲಿಲ್ಲ. ಈ ಬಬಲ್ ಗಮ್ ಗೋಡೆಯನ್ನು ನೋಡಲು ಹೋಗುವ ಪ್ರವಾಸಿಗರು ಗಮ್‌ಗಳನ್ನು ಎಳೆದು ತಮಗೆ ಬೇಕಾದ ಆಕಾರ ಮಾಡಿ ತಮ್ಮ ಹೆಸರು ಮೂಡಿಸುವುದು, ಆಕೃತಿಗಳನ್ನು ಮೂಡಿಸುವುದಲ್ಲದೇ ಅದನ್ನು ಬಲವಂತವಾಗಿ ಕಿತ್ತು ತಮ್ಮ ಬಾಯೊಳಗೆ ಹಾಕಿಕೊಂಡು ಜಗಿದು ಫೋಟೊಗಾಗಿ ಪೋಸ್ ಕೊಡುವವರೂ ಇದ್ದಾರೆಂದರೆ ನಂಬಲೇಬೇಕು. ಈ ತಾಣವು 'ಅತ್ಯಂತ ಸೂಕ್ಷ್ಮಾಣುಗಳನ್ನು ಹೊಂದಿರುವ ಆಕರ್ಷಣೀಯ ಸ್ಥಳ' ಎಂದು ಗುರುತಿಸಿಕೊಂಡಿದೆ.

ಗಮ್ ವಾಲ್‌ಗೆ ಸಂಬಂಧಿಸಿದಂತೆ ವಿವಾದಗಳೂ ಇವೆ. ಈ ಐತಿಹಾಸಿಕ ಕಟ್ಟಡವನ್ನು ಶುಚಿಗೊಳಿಸುವುದು ಮುಖ್ಯ ಧ್ಯೇಯ ಎಂಬ ವಾಗ್ವಾದ ಒಂದು ಕಡೆಯಾದರೆ, ಈ ಗಮ್‌ಗಳನ್ನು ಕಿತ್ತುಹಾಕಿದರೆ ಅವುಗಳ ಹಿಂದೆ ಅಡಗಿರುವ ಒಟ್ಟಾರೆ ಇತಿಹಾಸ ಹಾಗೂ ಭಾವನಾತ್ಮಕತೆಯನ್ನು ಹೊಸಕಿ ಹಾಕಿದಂತೆ ಎಂಬ ಚರ್ಚೆಗಳಾಗುತ್ತಿವೆ.

ಥಿಯೇಟರ್‌ಗೆ ಹೋಗುವ ಮಂದಿಯಿಂದ ತಮಾಷೆಗಾಗಿ ಶುರುವಾದ ಈ ಕ್ರಿಯೆ ಸಿಯಾಟಲ್‌ನ ಗಮ್ ವಾಲಿನ ಅಸಾಂಪ್ರದಾಯಿಕ ಆಚರಣೆಯಾಗಿ ನಗರದ ಕಲಾತ್ಮಕತೆಗೆ ಪೂರಕವಾಗಿದೆ. ಒಟ್ಟಿನಲ್ಲಿ ರಂಗುರಂಗಿನ ಬಣ್ಣದ ಅಂಟುಗಳನ್ನು ಮೆತ್ತಿಕೊಂಡಿರುವ ಈ ಗಮ್ ವಾಲ್, ಕಲೆ ಎಂಬುದು ಅನಿರೀಕ್ಷಿತ ಸ್ಥಳಗಳಲ್ಲಿ ಯಾವ ರೂಪದಲ್ಲಾದರೂ ಹುಟ್ಟಬಹುದು ಎನ್ನುವುದನ್ನು ನಮಗೆ ಹೇಳುವಂತಿದೆ.

ಪ್ರತಿಕ್ರಿಯಿಸಿ: feedback@sudha.co.in